# ಆಡಲಾಗದ, ಕೇಳಿಸಿಕೊಳ್ಳಲಾಗದ...

ನೀಟಾಗಿ ಶೇವ್ ಮಾಡಿದ್ದ ಕೆನ್ನೆ ಫಳಫಳ ಹೊಳೆಯುತ್ತಿತ್ತು. ಹೊಂಬಣ್ಣ. ಎಷ್ಟೇ ಅಚ್ಚುಕಟ್ಟಾಗಿ ಬಾಚಿದರೂ ಜಾರುವಷ್ಟು ನವಿರಾದ ಕೆಂಚು ಕೂದಲು. ಗಮನಾರ್ಹ ನಿಲುವು. ಎಲ್ಲರ ದೃಷ್ಟಿ ಕೇಂದ್ರೀಕರಿಸುವ ನಟ. ಎಲ್ಲರ ಕೆಂದುಟಿಯುತ್ತ. ತುಟಿಚಲನೆಯಿಂದ ಆಡುತ್ತಿರುವ ಮಾತು ಏನು ಎಂದು ಎಲ್ಲರೂ ಅಂದಾಜು ಮಾಡಬೇಕಿತ್ತು. ಆದರೆ, ತುಸುವೂ ಕೀಳರಿಮೆ ಇಲ್ಲದೆ ತನಗೆ ತೋಚಿದ್ದನ್ನು ಉಲಿಯುವ ಆತ್ಮವಿಶ್ವಾಸವಂತೂ ಇತ್ತು. ಅರೆ ಮೂಕ. ಶ್ರವಣ ಸಾಮರ್ಥ್ಯವೂ ಕಡಿಮೆ.

ಹಾಗಿದ್ದ ನಟನ ಚೊಚ್ಚಿಲ ಸಿನಿಮಾದ ಪ್ರೀಮಿಯರ್ ಷೋ ಅದೇ ತಾನೆ ಮುಗಿದಿತ್ತು. ಅಷ್ಟೆಲ್ಲ ಸಮಸ್ಯೆ ಇರುವ ಯುವಕ ಇಡೀ ಚಿತ್ರಕ್ಕೆ ತುಟಿಚಲನೆ ಮಾಡಿದ ಪರಿ ಕಂಡು ಎಲ್ಲರೂ ಚಕಿತಗೊಂಡರು. ಆ ಚಿತ್ರ ಲಿಮ್ಕಾ ದಾಖಲೆ ಪುಸ್ತಕಕ್ಕೂ ಸೇರಿತೆನ್ನಿ.

ನಟನ ತಂದೆ ವೈದ್ಯ. ಧಾರಾವಾಹಿಗಳಲ್ಲಿ ನಟಿಸಿದ್ದವರು. ನಿರ್ದೇಶಕ ಎಸ್. ನಾರಾಯಣ್ ಸ್ನೇಹವಿತ್ತು ಅವರಿಗೆ. ಹಾಗೆಯೇ ಸಿನಿಮಾ ಸಾಹಚರ್ಯಕ್ಕೆ ಬಿದ್ದರು. ಅವರ ಅದೇ ಹವ್ಯಾಸ ಮಗನನ್ನೂ ಆಕರ್ಷಿಸಿತ್ತು. ವಿಶೇಷ ಸಾಮರ್ಥ್ಯದ ಮಗನನ್ನು ನಟನನ್ನಾಗಿ ಮಾಡುವುದು ಸುಲಭವಲ್ಲ. ಅದಕ್ಕಾಗಿ ಯುವಕ ಬಹಳಷ್ಟು ಕಷ್ಟಪಟ್ಟಿದ್ದ. ತಂದೆ ಕೂಡ ಸಾಥ್ ನೀಡಿದ್ದರು.

'ನನ್ನ ಮಗ ಕಂಪೆನಿಯೊಂದನ್ನು ನಡೆಸುತ್ತಾನೆ' ಆ ತಂದೆ ಹೆಮ್ಮೆಯಿಂದ ಹೇಳಿಕೊಂಡರು. ಆಗಿನ್ನೂ ವಾಟ್ಸ್ ಆ್ಯಪ್ ಇರಲಿಲ್ಲ. ಯುವಕ ತನ್ನ ಕಂಪೆನಿಯ ವ್ಯವಹಾರವನ್ನೆಲ್ಲ ಎಸ್ಎಂಎಸ್ ಮೂಲಕವೇ ಮಾಡುತ್ತಿದ್ದ. ಇಡೀ ಕಂಪೆನಿಯನ್ನು ತೂಗಿಸಿಕೊಂಡು ಹೋಗುವ ಜಾಣ್ಮೆ ಅವನಲ್ಲಿ ಇತ್ತು. ಇದು ವಿಶೇಷ ಸಾಮರ್ಥ್ಯದ ಹುಡುಗನ ಎರಡನೇ ಮುಖ. ಮೂರನೇ ಮುಖ ಕ್ರಿಕೆಟ್ ಪ್ರೀತಿ. ಅವನು ಆಲ್‌ರೌಂಡರ್. ಬ್ಯಾಟಿಂಗ್‌ನಲ್ಲಂತೂ ವೃತ್ತಿಪರ ಕ್ರಿಕೆಟಿಗರ ಸರಿಸಮವಾಗಿ ಆಡಬಲ್ಲ ಪ್ರತಿಭಾವಂತ. ವಿಶೇಷ ಸಾಮರ್ಥ್ಯದ ಕ್ರಿಕೆಟ್ ತಂಡಗಳನ್ನು ಪ್ರತಿನಿಧಿಸಿ, ಸೈ ಎನ್ನಿಸಿಕೊಂಡವನು.

ಒಂದೆಡೆ ಬೆರಳೆಣಿಕೆಯಷ್ಟು ಚಿತ್ರಗಳಲ್ಲಿ ಅಭಿನಯಿಸಿದ ಯುವಕ ಇನ್ನೊಂದು ಕಡೆ ಕಂಪೆನಿಯನ್ನೂ ಬೆಳೆಸಲಾರಂಭಿಸಿದ. ಅದಕ್ಕೆ ಅಪ್ಪನ ಸಾಥ್ ಇತ್ತು. ಕ್ರಮೇಣ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಜನಪ್ರಿಯವಾಗತೊಡಗಿತು. ಪ್ರಮುಖ ಬ್ಯಾಟ್ಸ್‌ಮನ್ ಆಗಿ ಈ ಹುಡುಗ ಗಮನಸೆಳೆದ. ಸೆಲೆಬ್ರಿಟಿ ಕ್ರಿಕೆಟ್ ಮೂಲಕ ಅರೆಕಾಲಿಕ ನಟನ ಹೆಸರು ಗುರುತಾಗತೊಡಗಿತು. ಇಷ್ಟೆಲ್ಲ ಆಗುವ ಹೊತ್ತಿಗೆ ಎರಡು ಹೆಣ್ಣುಮಕ್ಕಳ ತಂದೆಯಾಗಿದ್ದ. ಕಂಪೆನಿ ವ್ಯವಹಾರದಲ್ಲಿ ಏರುಪೇರಾಯಿತು. ಸಾಲದ ಶೂಲ. ಎಸ್ಎಂಎಸ್ ಜಾಗದಲ್ಲಿ ವಾಟ್ಸ್ ಆ್ಯಪ್ ಬಂದಿತ್ತು. ಮೆಸೇಜು ಕಳಿಸುವ ದಾರಿ ಬೇರೆ. ಕನಸು ಕಂಗಳ ತರುಣ ಹೊರಳಿಕೊಂಡಿದ್ದ ದಾರಿಯೂ ಬೇರೆ ಎಂದು ಗೊತ್ತಾದದ್ದೇ ಮೊನ್ನೆ ಅವನು ಆತ್ಮಹತ್ಯೆ ಮಾಡಿಕೊಂಡಾಗ.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68